ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
<u>ಸಿ.ಸಿ.ನಂ.**2869/2025**</u>

ದಿನಾಂಕಃ**02.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ತಿಮ್ಮಪ್ಪ | ಚಾಸಾ-1,<br>ಪ್ರಾಸಾ-1 |
| ತಂದೆಯ ಹೆಸರು | ತಿಮ್ಮಾಬೋವಿ | |
| ವಯಸ್ಸು | 41 ವರ್ಷ | |
| ಉದ್ಯೋಗ | ಕೂಲಿ ಕೆಲಸ | |
| ವಾಸ | ಲಕ್ಷ್ಮೀಪುರ ಗ್ರಾಮ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 3 ಮತ್ತು 4 ರವರ ಪರಿಚಯವಿದೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು ಸದರಿ ಸಹಿಯನ್ನು ಕಡೂರಿನ ತಿಮ್ಮಣ್ಣ ರವರ ಜಮೀನಿನ ಬಳಿ ಮಧ್ಯಾಹ್ನ 2 ರಿಂದ 2.45 ರ ಸಮಯದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಸದರಿ ಸ್ಥಳದಲ್ಲಿ ಅಪಘಾತದ ಸಂಬಂಧ ಸ್ಥಳದ ಮಹಜರ್ ಮಾಡುತ್ತಿದ್ದರು. ಸದರಿ ಸ್ಥಳ ಮಹಜರ್ ಅನ್ನು ಮತ್ತು ಸಹಿಯನ್ನು ಸಾಕ್ಷಿಯು ಗುರತಿಸಿದ್ದರಿಂದ ದಾಖಲೆಯನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನುನಿಪಿ1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರಿನೊಂದಿಗೆ ಬರೆದ ನಕ್ಷೆಯನ್ನು ಗುರುತಿಸಿದ್ದು ಅದನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ನಿಪಿ1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳನ್ನು ನನಗೆ ಓದಿ ಹೇಳಿದ್ದರು, ಈಗ ಕೆಲವೊಂದು ಮರೆತುಹೋಗಿದೆ. ಈಗ ನೋಡುತ್ತಿರುವ ಪೋಟೋಗಳನ್ನು ಸದರಿ ಸ್ದಳದಲ್ಲಿ ತೆಗೆಯಲಾಗಿದೆ ಸದರಿ ಪೋಟೋಗಳನ್ನು ನಿಪಿ 3 ರಿಂದ 6 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ಇರುವುದು ನಾನೇ. ನಿಪಿ 1 ಮತ್ತು 2 ಕ್ಕೆ ನನ್ನ ಜೊತೆ ಚಾಸಾ 3, 4 ರವರು ಸಹ ಸಹಿ ಮಾಡಿರುತ್ತಾರೆ.

ನಂತರ ಮಹಜರ್ ಮಾಡಿದ ಸ್ಥಳದಿಂದ ಠಾಣೆಗೆ 2.50 ಕ್ಕೆ ಹೋಗಿರುತ್ತೇವೆ. ಠಾಣೆಯಲ್ಲಿ 2.50 ರಿಂದ 3.20 ರ ಅವಧಿಯಲ್ಲಿ ಅಪಘಾತಕ್ಕೆ ಒಳಗಾಗಿದ್ದ ಕಾರು ಮತ್ತು ಬೈಕ್ ಅನ್ನು ಪೊಲೀಸರು ನನ್ನ ಮತ್ತು ಚಾಸಾ 3, 4 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಅಮಾನತ್ತು ಪಂಚನಾಮೆಯನ್ನು ಬರೆದು ನನ್ನ ಸಹಿ ಪಡೆದಿರುತ್ತಾರೆ,

ಸಾಕ್ಷಿಯು ಸದರಿ ಅಮಾನತ್ತು ಪಂಚನಾಮೆಯನ್ನು ಗುರುತಿಸಿದ್ದು, ಅದನ್ನು ನಿಪಿ 7 ಎಂದು ಸಾಕ್ಷಿಯ ಸಹಿಯನ್ನು ನಿಪಿ7 ಎ ಎಂದು ಗುರುತಿಸಲಾಯಿತು. ಸದರಿ ವೇಳೆಯಲ್ಲಿ ಈಗ ನೋಡುತ್ತಿರುವ ಪೋಟೋಗಳನ್ನು ತೆಗೆದಿರುತ್ತಾರೆ, ಅವುಗಳನ್ನು ನಿಪಿ 8 ರಿಂದ 11 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-

ದಿಃ17.03.2025 ರಂದು ಮಹಜರಿಗೆ ಹಾಜರಾಗಲು ಪೊಲೀಸರು ನೋಟೀಸು ನೀಡಿರುತ್ತಾರೆ. ಮೃತ ರಾಜು ನನ್ನ ಸಂಬಂಧಿಕರು ಎಂದರೆ ಸರಿ. ಮೃತ ರಾಜು ರವರ ಕುಟುಂಬಕ್ಕೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರದೆ ಕೇವಲ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮಹಜರ್ ಸ್ಥಳದಲ್ಲಿ ಮತ್ತು ಠಾಣೆಯಲ್ಲಿ ಸುಮಾರು 5 ಸಹಿಗಳನ್ನು ಮಾಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ಸ್ಥಳ ಅಥಾವ ಅಮಾನತು್ತ ಮಹಜರ್ ಮಾಡಿಲ್ಲದಿದ್ದರು ಸಹಃ ಮೃತ ರಾಜು ರವರ ಕುಟುಂಬಕ್ಕೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.